ರಾಜ್ಯದಲ್ಲಿ ಅರಣ್ಯ ನಾಶ

632 (1140) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1998-99ನೇ ಸಾಲಿನ ಫೆಬ್ರವರಿ ಅಂತ್ಯದ ವರೆಗೆ ಉಂಟಾಗಿರುವ ಅರಣ್ಯ ನಾಶದ ವಿಸ್ತೀರ್ಣ ಎಷ್ಟು ?(ಬೆಂಕಿ ಮತ್ತು ಇತರೆ ರೀತಿಯಿಂದ ಉಂಟಾಗಿರುವ ಅರಣ್ಯ ನಾಶಗಳು)

ಆ) ಅರಣ್ಯ ನಾಶದ ಘಟನೆಯಿಂದ ಒಟ್ಟಾರೆ ಅರಣ್ಯ ರಕ್ಷಿತ ಪ್ರದೇಶದ ಇಳಿಕೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

ಶ್ರೀ ಡಿ ಮಂಜುನಾಥ (ಅರಣ್ಯ ಸಚಿವರು) :

ಅ) ರಾಜ್ಯದಲ್ಲಿ 1998-99ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಬೆಂಕಿ ಮತ್ತು ಇತರೇ ರೀತಿಯಿಂದ ಉಂಟಾಗಿರುವ ಅರಣ್ಯ ನಾಶದ ವಿವರಗಳು ಈ ಕೆಳಕಂಡ ಪ್ರದೇಶಗಳಲ್ಲಿ ನಡೆದಿರುತ್ತದೆ.

1. ಮಡಿಕೇರಿ ಸಾಮಾಜಿಕ ಅರಣ್ಯ ವಿಭಾಗ, ಮಡಿಕೇರಿ ವಲಯದ ಪೇರೂರು ಗ್ರಾಮದ ಸಿ ಮತ್ತು ಡಿ ವರ್ಗದ ಜಮೀನು ಸರ್ವೆ ನಂ. 3 : 5ರಲ್ಲಿ ದಿನಾಂಕ 26.2.99 ರಂದು

ಕ್ರಮ ಸಂಖ್ಯೆ	ನೆಡುತೋಪಿನ ವಿವರ	ವಿಸ್ತೀರ್ಣ (ಹೆಕ್ಟೇರು) ಗಳಲ್ಲಿ	ಯಾವ ಯೋಜನೆಯಲ್ಲಿ ಬೆಳೆಸಲಾಗಿದೆ	ಷರಾ
1	1994ನೇ ನೆಡು ತೋಪು	21.50	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಶೇ. 60 ಗಿಡಗಳು ಬದುಕುಳಿಯುವ ಸಾಧ್ಯತೆ ಇದೆ.
2	1995ನೇ ನೆಡುತೋಪು	28.00	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	
3	1995ನೇ ನೆಡುತೋಪು	37.00	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಶೇ. 30 ರಿಂದ 40 ಗಿಡಗಳು ಬದುಕುಳಿಯುವ ಸಾಧ್ಯತೆ ಇದೆ.
4	1995ನೇ ನೆಡುತೋಪು	28.00	ಉದ್ಯೋಗ ಭರವಸೆ ಯೋಜನೆ	

2. ಮೈಸೂರು ವಿಭಾಗದ ಚಾಮುಂಡಿ ಬೆಟ್ಟ ಪ್ರದೇಶದಲ್ಲಿ ವಿವಿಧ ಭಾಗಗಳಲ್ಲಿ ಒಟ್ಟು 15 ಎಕರೆ ಪ್ರದೇಶಕ್ಕೆ ಬೆಂಕಿ ಬಿದಿದ್ದು ಅಲ್ಲಿ ಬೆಳೆದಿರುವ ಹುಲ್ಲು ಮಾತ್ರ ಸುಟ್ಟು ಹೋಗಿದ್ದು, ಹಾಗೂ ಲಿಂಗಾಬಿಧಿ ಕೆರೆ ಅಂಗಳ ಪ್ರದೇಶದಲ್ಲಿ ಒಂದು ಎಕರೆಗೆ ಮಾತ್ರ ಬೆಂಕಿ ಬಿದಿದ್ದು ಹುಲ್ಲು ಮಾತ್ರ ಸುಟ್ಟ ಹೋಗಿರುತ್ತದೆ. ಬೇರೆ ಯಾವುದೇ ನಷ್ಟವಾಗಿರುವುದಿಲ್ಲ.

3. ಬೆಳಗಾಂ ವೃತ್ತದ ಹಾವೇರಿ ವಿಭಾಗದಲ್ಲಿ 0.001 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿವಿದ್ಯುತ್ ಲೈನ್ ಮುರಿದು ಬಿದ್ದಿದ್ದುದರಿಂದ ಬೆಂಕಿ ತಾಗಿರುತ್ತದೆ. ಗದಗ ವಿಭಾಗದ ಮುಂಡರಗಿ ವಲಯದ ಗುಳ್ಳದ ಬೂದಿಹಾಳ್ ಅರಣ್ಯ ಸರ್ವೆ ನಂ. 79 ಸಿ ಮತ್ತು 84 ಸಿ ನಲ್ಲಿ 5 ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದಿದ್ದು, ಬೇರೆ ಯಾವುದೇ ಹಾನಿಯಾಗಿರುವುದಿಲ್ಲ.

4. ಬೆಂಗಳೂರು ವೃತ್ತದ, ಬೆಂಗಳೂರು ಗ್ರಾಮಾಂತರ ವಿಭಾಗದ ಕನಕಪುರದಲ್ಲಿ 20ಹೆಕ್ಟೇರ್ ಹಾಗೂ ಚನ್ನಪಟ್ಟಣ ವಲಯದಲ್ಲಿ 162 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಬೆಂಕಿ ಬಿದ್ದಿರುತ್ತದೆ. ಬೇರೆ ಯಾವುದೇ ನಷ್ಟವುಂಟಾಗಿರುವುದಿಲ್ಲ.

ಆ) ಅರಣ್ಯಕ್ಕೆ ಬೆಂಕಿ ಬೀಳುವುದನ್ನು ತಡೆಗಟ್ಟಲು ಅರಣ್ಯ ಹಾಗೂ ನೆಡುತೋಪುಗಳ ಸುತ್ತಲೂ ಡಿಮಾರ್ಕೆಷನ್ ಲೈನ್‌ಗಳನ್ನು ಹಾಗೂ ಬೆಂಕಿ ರೇಖೆಗಳನ್ನು ಪ್ರತಿ ವರ್ಷವೂ ಕ್ಲಿಯರಿಂಗ್ ಮಾಡಲಾಗುತ್ತದೆ. ಪ್ರತಿ ವರ್ಷವೂ ಬೆಂಕಿ ಬೀಳುವ ಕಾಲದಲ್ಲಿ ಕಾವಲುಗಾರರನ್ನು ನೇಮಿಸಿಕೊಳ್ಳಲಾಗುತ್ತದೆ. ಬೆಂಕಿಯನ್ನು ನಿಯಂತ್ರಿಸಲು ಆಧುನಿಕ ಬೆಂಕಿ ನಿಯಂತ್ರಣ ಸಲಕರಣೆಗಳನ್ನು ಸರಬರಾಜು ಮಾಡಲಾಗುತ್ತಿದೆ. ಸೂಕ್ಷ್ಮ ಪ್ರದೇಶದಲ್ಲಿ ವೀಕ್ಷಣ ಗೋಪುರಗಳನ್ನು ನಿರ್ಮಿಸಲಾಗಿದೆ.

ವಾಣಿಜ್ಯ ತೆರಿಗೆ ಸಂಗ್ರಹ

633 (1138) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98, 1998-99, ವಾಣಿಜ್ಯ ತೆರಿಗೆಇಲಾಖೆಯ ವಾರ್ಷಿಕ ತೆರಿಗೆ ಸಂಗ್ರಹದ ಗುರಿಯೆಷ್ಟು?

ಆ) ಎಷ್ಟು ಪ್ರಮಾಣದಲ್ಲಿ ನಿಗಧಿತ ಗುರಿಯನ್ನು ಸಾಧಿಸಲಾಗಿದೆ (ವಿವರ ಒದಗಿಸಬಹುದು)?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ)

ವರ್ಷ	ಗುರಿ (ರೂ. ಕೋಟಿಗಳಲ್ಲಿ)
1997-98	4552.00
1998-99	5175.00